ಊ) ಮೈಸೂರು ತಾಲ್ಲೂಕಿನಲ್ಲಿ ಸಬ್‌ಸ್ಟೇಷನ್‌ಗಳಿರುವ ಗ್ರಾಮಗಳಿಗೆ ದಿನದ 24 ಗಂಟೆಯು ನಿರಂತರ ವಿದ್ಯುತ್ ನೀಡುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಋ) ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಇಂತಹ ಯಾವುದೇ ಪ್ರಕರಣ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದಲ್ಲಿ ದಾಖಲಾಗಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಹೌದು.

ಈ) ಎಲ್ಲಾ ಮೂಲಗಳಿಂದ ಹೆಚ್ಚಿನ ವಿದ್ಯುತ್ ಖರೀದಿಸಿ ಸರಬರಾಜು ಮಾಡುವ ವ್ಯವಸ್ಥೆ ಮಾಡಲಾಗಿದೆ.

ಉ) ಹೌದು.

ಊ) ಪ್ರಸ್ತುತ ಲಭ್ಯವಿರುವ ವಿದ್ಯುತ್ ಆಧಾರದ ಮೇರೆಗೆ ಗ್ರಾಮೀಣ ಪ್ರದೇಶದಲ್ಲಿ 6 ಗಂಟೆ 3 ಫೇಸ್ (ಹಗಲು ವೇಳೆಯಲ್ಲಿ 3 ಗಂಟೆ ಹಾಗೂ ರಾತ್ರಿ ವೇಳೆಯಲ್ಲಿ 3 ಗಂಟೆ) ಮತ್ತು 6 ಗಂಟೆ ಸಿಂಗಲ್ ಫೇಸ್ (ಬೆಳಿಗ್ಗೆ 4 ರಿಂದ 6 ಗಂಟೆಯವರೆಗೆ ಮತ್ತು ಸಂಜೆ 7 ರಿಂದ ರಾತ್ರಿ 11 ರವರೆಗೆ) ವಿದ್ಯುತ್ ನೀಡಲಾಗುತ್ತಿದೆ.

ಕೃಷ್ಣಾ ನದಿಯಲ್ಲಿ ಮರಳು ತೆಗೆಯಲು ಪರವಾನಗಿ ಕೊಡುವುದು

233 (111) ಶ್ರೀ ಸಿದ್ದುಸವದಿ (ತೇರದಾಳ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾರಾಷ್ಟ್ರ ಸರ್ಕಾರದಂತೆ ಕೃಷ್ಣಾ ನದಿಯಲ್ಲಿ ಬೋಟ್ ಮೂಲಕ ಮರಳು ತೆಗೆಯಲು ಪರವಾನಗಿ ಕೊಡಲು ಇರುವ ತೊಂದರೆಗಳೇನು;

ಆ) ಅಧಿಕೃತವಾಗಿ ಕೊಡದಿದ್ದಲ್ಲಿ ಹತ್ತಾರು ಕೋಟಿ ರೂಪಾಯಿ ಬೆಲೆ ಬಾಳುವ ಮರಳು ಅನಧಿಕೃತವಾಗಿ ಬೋಟುಗಳ ಮುಖಾಂತರವೇ ತೆಗೆಯುತ್ತಿರುವುದರಿಂದ ಪ್ರತಿ ವರ್ಷ ಸರ್ಕಾರದ ಬೊಕ್ಕಸಕ್ಕೆ ಹಾನಿ ಆಗುತ್ತಿಲ್ಲವೇ;

ಇ) ಕೃಷ್ಣಾ ನದಿಯಲ್ಲಿ ಮರಳು ತೆಗೆಯುವುದರಿಂದ ಆಲಮಟ್ಟಿ ಡ್ಯಾಮ್ ಹೂಳಿನಿಂದ ಮುಚ್ಚುವುದನ್ನು ತಡೆದಂತೆ ಆಗುವುದಿಲ್ಲವೇ;

ಈ) ಒಂದು ವೇಳೆ ಪರವಾನಗಿ ಕೊಡದೇ ಇದ್ದಲ್ಲಿ, ಮೂಲಭೂತ ಅಭಿವೃದ್ಧಿಗಳಾದ ಕಟ್ಟಡ ರಸ್ತೆ, ಸೇತುವೆಗಳನ್ನು ಯಾವ ರೀತಿ ಕಟ್ಟಬೇಕು;

ಉ) ಪರ್ಯಾಯ ವ್ಯವಸ್ಥೆಯನ್ನಾದರೂ ಮಾಡಲಾಗುವುದೇ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಮಹಾರಾಷ್ಟ್ರದಲ್ಲಿ ಒಬ್ಬ ಗುತ್ತಿಗೆದಾರನು ಒಂದು ಯಾಂತ್ರಿಕ ದೋಣಿಯನ್ನು ಮರಳು ಗಣಿಗಾರಿಕೆಗೆ ಬಳಸಲು ಅನುಮತಿಸಲಾಗುತ್ತಿದೆ. ಗಣಿ ಮತ್ತು ಭೂವಿಜ್ಞಾನ ಇಲಾಖೆಯು ದಿ: 14-01-2004 ರಂದು ಹೊರಡಿಸಿರುವ ಸುತ್ತೋಲೆಯಲ್ಲಿ ಮರಳು ಗಣಿಗಾರಿಕೆಗೆ ಯಂತ್ರೋಪಕರಣಗಳ ಬಳಕೆಯನ್ನು ನಿಷೇಧಿಸಲಾಗಿದೆ. ಮರಳು ಗಣಿಗಾರಿಕೆಯಲ್ಲಿ ಯಂತ್ರೋಪಕರಣಗಳ ಬಳಕೆಗೆ ಅನುಮತಿಸುವ ಕುರಿತು ಸರ್ಕಾರವು ಪರಿಶೀಲಿಸುತ್ತಿದೆ.

ಆ) ಬಾಗಲಕೋಟೆ ಜಿಲ್ಲೆಯಲ್ಲಿ 2009-10ನೇ ಸಾಲಿನಲ್ಲಿ 27 ಎಕರೆ ಪ್ರದೇಶದ 22 ಮರಳು ಬ್ಲಾಕ್‌ಗಳನ್ನು ಹರಾಜು ಮಾಡಿದ್ದು, ರೂ.50.48 ಲಕ್ಷ ರಾಜಧನ ಬಂದಿರುತ್ತದೆ. ಇನ್ನೂ 78 ಎಕರೆ ಪ್ರದೇಶದ 43 ಮರಳು ಬ್ಲಾಕ್‌ಗಳನ್ನು ಹರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಅನಧಿಕೃತವಾಗಿ ದೋಣಿ ಗಳನ್ನು ಬಳಸಿ ಮರಳು ಗಣಿಗಾರಿಕೆ ಮಾಡುವುದರಿಂದ ಸರ್ಕಾರದ ಬೊಕ್ಕಸಕ್ಕೆ ಹಾನಿಯಾಗುತ್ತಿದೆ.

ಇ) ಆಲಮಟ್ಟಿ ಅಣೆಕಟ್ಟಿನ ಹಿನ್ನೀರಿನಲ್ಲಿ ಮರಳು ತೆಗೆಯುವುದರಿಂದ ಅಣೆಕಟ್ಟಿಗೆ ಹೂಳು ಬರುವುದನ್ನು ತಡೆಗಟ್ಟಬಹುದು ಹಾಗೂ ನೀರಿನ ಶೇಖರಣೆ ಹೆಚ್ಚಾಗುತ್ತದೆ.

ಈ) ಮರಳು ಅತ್ಯಾವಶ್ಯಕವಾಗಿ ಬೇಕಾಗಿರುವ ಕಚ್ಚಾ ಸಾಮಗ್ರಿಯಾಗಿರುವುದರಿಂದ, ಜಿಲ್ಲೆಯಲ್ಲಿ ಹೆಚ್ಚು ಮರಳು ಪ್ರದೇಶಗಳನ್ನು ಗುರ್ತಿಸಿದ್ದು ಹರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಉ) ಮಹಾರಾಷ್ಟ್ರ ಮಾದರಿಯಲ್ಲಿ ಮರಳು ಗಣಿಗಾರಿಕೆಗೆ ರಾಜ್ಯದಲ್ಲಿಯೂ ದೋಣಿ ಬಳಕೆಗೆ ಅನುಮತಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.